ಸಾಕ್ಷಿಯನ್ನು ದಿಃ 16.06.2023 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಪಿರ್ಯಾದುದಾರರ ಮುಂದುವರೆದ ಸ್ವ ಇಚ್ಚಾ ಹೇಳಿಕೆ :

2. ನಾನು ಮುಂದುವರೆದು ಹೇಳುವುದೇನೆಂದರೆ ನನ್ನ ಹೆಸರಿನಲ್ಲಿ ರಿಲಿಗೇರ್‌ನಿಂದ ಸಾಲವನ್ನು ಪಡೆದ ಬಳಿಕ ಲಾರ್ಸನ್ ಅಂಡ್ ಟೂ ಬ್ರೋ ಹಣಕಾಸು ಸಂಸ್ಥೆಯಿಂದ ರೂ. 53 ಲಕ್ಷ ಸಾಲವನ್ನು ನನ್ನ ಹೆಂಡತಿಯಾದ 3 ನೇ ಆರೋಪಿ ಸೌರಭ ರವರು ಪಡೆದುಕೊಂಡು ಅದನ್ನು ಟಾಪ್ ಅಪ್ ಮಾಡಿಸಿಕೊಂಡು, ಸದರಿ ಸಾಲಕ್ಕೂ ಸಹ ನನ್ನನ್ನೇ ಪ್ರಧಾನ ಬಾಧ್ಯಸ್ಥನನ್ನಾಗಿ ಮಾಡಿರುತ್ತಾರೆ. ಅಲ್ಲದೇ ನನ್ನಿಂದಲೇ ಮಾಹೇಯಾನ ಕಂತು ಪಾವತಿಯನ್ನು ಮಾಡಿಸಿಕೊಂಡು ಬಂದಿರುತ್ತಾರೆ. ನಾನು ಒಟ್ಟಾರೆಯಾಗಿ ರೂ. 54 ಲಕ್ಷ ಮೇಲ್ಪಟ್ಟಂತೆ ಸಾಲವನ್ನು ತಿರುವಳಿ ಮಾಡುತ್ತಾ ಬಂದಿರುತ್ತೇನೆ. 3 ನೇ ಆರೋಪಿ ಸೌರಭ ರವರ ತಂದೆ ಅಂದರೆ ಈ ಈ ಖಾಸಗಿ ಫಿರ್ಯಾದಿನ 1 ನೇ ಆರೋಪಿಯು ಮಾಡುತ್ತಿರುವ ವಂಚನೆಯನ್ನು ಮನಗಂಡು ನಾನು ನನ್ನ ಹೆಸರಲ್ಲಿ ಇದ್ದಂತಹ ಸ್ವತ್ತನ್ನು ನನ್ನ ಹೆಸರಿಗೆ ದಾನವಾಗಿ ಪಡೆದುಕೊಂಡು ಬ್ಯಾಂಕಿಗೆ ಅರ್ಪಿಸಿ ಬಿಟ್ಟಿರುತ್ತೇನೆ.

3. ನಾನು ಮುಂದುವರೆದು ಹೇಳುವುದೇನೆಂದರೆ ಈ ಖಾಸಗಿ ಫಿರ್ಯಾದಿನ ಆರೋಪಿಗಳು ನಮ್ಮ ಕುಟುಂಬಕ್ಕೆ ಹೊಂದಿಕೊಂಡಂತಹ ರಾಜಾಜಿನಗರದಲ್ಲಿರುವ ಒಟ್ಟು ಕುಟುಂಬದ ಸುಮಾರು 4 ಕೋಟಿ ಮೌಲ್ಯದ ಮನೆ ಹಾಗೂ ಔದ್ಯಮಿಕ ಕಟ್ಟಡ ಇದ್ದಂತಹ ನಿವೇಶನವನ್ನು ಸೌಹಾರ್ದ ಕೋ ಆಪರೇಟೀವ್ ಸೊಸೈಟಿಯಲ್ಲಿ ಅಡಮಾನವಾಗಿ ಇಟ್ಟು ಬಂದಂತಹ 4.5 ಕೋಟಿ ಹಣವನ್ನು 3 ನೇ ಆರೋಪಿ ಸೌರಭಳಿಗೆ ಅವಳು ಬೇಡಿಕೆ ಇಟ್ಟಂತೆ ಶೇರ್ ಮಾರುಕಟ್ಟೆಗೆ ಬಂಡವಾಳವಾಗಿ ಹೂಡಲು ನೀಡಿರುತ್ತೇನೆ.

4. ನಾನು ಮುಂದುವರೆದು ಹೇಳುವುದೇನೆಂದರೆ 3 ನೇ ಆರೋಪಿಗೆ ನಮ್ಮ ಭಾವ ನವರಿಂದ ಕೈ ಸಾಲವಾಗಿ ಪಡೆದ 2.5 ಕೋಟಿ ಹಣವನ್ನು 3 ನೇ ಆರೋಪಿಯು ಅವರ ಖಾತೆಗೆ ನನಗೆ ತಿಳಿಯದಂತೆಯೇ ವರ್ಗಾಯಿಸಿಕೊಂಡಿರುತ್ತಾರೆ. ಹೀಗೆ ನನ್ನಲ್ಲಿ ಇದ್ದಂತಹ ಎಲ್ಲಾ ಹಣವನ್ನು ಆರೋಪಿತರು ಸಮಾನ ಉದ್ದೇಶದಿಂದ ನನಗೆ ಕೇಡು ಉಂಟು ಮಾಡಲು ವಂಚಿಸಿದ್ದ ಕಾರಣ ನಾನು ದಿವಾಳಿಯಾಗಿರುತ್ತೇನೆ ಹಾಗೂ 2014 ರಲ್ಲಿ 3 ನೇ ಆರೋಪಿಯು ನನ್ನ ಮನೆಯನ್ನು ತೊರೆದು ಹೋಗಿರುತ್ತಾರೆ.

5. ನಾನು ಮುಂದುವರೆದು ಹೇಳುವುದೇನೆಂದರೆ 2018 ನೇ ಇಸವಿಯಲ್ಲಿ ನಮ್ಮ ತಾಯಿಯವರು ಪುಣ್ಯ ಕ್ಷೇತ್ರಗಳಿಗೆ ತೀರ್ಥ ಯಾತ್ರೆಗೆ ಹೋಗಿದಂತಹ ಸಮಯದಲ್ಲಿ ಮನೆಯ ಜವಾಬ್ದಾರಿಯನ್ನು ವಹಿಸಿಕೊಂಡು ಜವಾಬ್ದಾರಿಯುತ ಸೊಸೆಯಂತೆ ನಟಿಸಿ ಒಟ್ಟಿಗೆ ಸಂಸಾರ ಮಾಡುವುದಾಗಿ ನಂಬಿಸಿ, 2018 ನೇ ಇಸವಿಯ ಆಗಸ್ಟ್ ತಿಂಗಳಿನಲ್ಲಿ 10 ದಿನಗಳ ಕಾಲ ಮನೆಯಲ್ಲಿಯೇ ಇದ್ದು ಯಾರಿಗೂ ತಿಳಿಯದಂತೆ ಅಡುಗೆ ಮಾಡುವ ಸಂದರ್ಭದಲ್ಲಿ ರೂ. 15 ಲಕ್ಷ ಮೌಲ್ಯದ ಒಡವೆಯನ್ನು ಕಳ್ಳತನ ಮಾಡಿಕೊಂಡು ಹೋಗಿರುತ್ತಾರೆ. ಸದರಿ ಆರೋಪಿತರು ನನಗೆ ತಿಳಿಯದಂತೆಯೇ ವಂಚನೆಯನ್ನು ಮಾಡಿ ನನ್ನಿಂದ ಹಣವನ್ನು ಕಾನೂನು ಬಾಹಿರವಾಗಿ ಅಕ್ರಮ ಲಾಭಕ್ಕಾಗಿ ಪಡೆದುಕೊಂಡು ಜೀವ ಬೆದರಿಕೆಯನ್ನು ಹಾಕಿರುತ್ತಾರೆ ಹಾಗೂ ಹಣವನ್ನು ಹಿಂದಿರುಗಿಸಬೇಕಾಗುತ್ತದೆ ಎಂಬ ದುರುದ್ದೇಶದಿಂದ ಪೊಲೀಸ್ ಠಾಣೆಗೆ ಹೋಗಿ ದೂರನ್ನು ನೀಡಿರುತ್ತಾರೆ.

6. ಈ ಎಲ್ಲಾ ಕಾರಣಗಳಿಂದಾಗಿ ನಾನು 24-12-2018 ರಂದು ಬಸವೇಶ್ವರ ನಗರ ಪೊಲೀಸ್ ಠಾಣೆಯಲ್ಲಿ ದೂರನ್ನು ದಾಖಲಿಸಿದಾಗ ಪೊಲೀಸರು ಅದನ್ನು ಸ್ವೀಕರಿಸಿದ ಬಳಿಕ ಯಾವುದೇ ಅಪರಾಧಿಕ ಕಾನೂನು ಕ್ರಮವನ್ನು ಜರುಗಿಸದೇ ಇದ್ದುದ್ದರಿಂದ ಆರೋಪಿಗಳಿಗೆ ಬಲವರ್ಧನೆ ಬಂದಂತೆ ಆಗಿದ್ದು  ನನ್ನ ವಿರುದ್ಧ ಕೌಟುಂಬಿಕ ವ್ಯಾಜ್ಯಗಳನ್ನು ಹೂಡಿರುತ್ತಾರೆ. ಈ  ಮೇಲಿನ ಎಲ್ಲಾ ಕಾರಣಗಳಿಂದ ಆರೋಪಿಗಳ ವಿರುದ್ಧ ಸಂಜ್ಞಾನ ತೆಗೆದುಕೊಂಡು ಕಾನೂನು ಕ್ರಮ ಜರುಗಿಸಬೇಕಾಗಿ ನ್ಯಾಯಾಲಯವನ್ನು ಪ್ರಾರ್ಥಿಕೊಳ್ಳುತ್ತೇನೆ.

(ಈ ಹಂತದಲ್ಲಿ ದಾಖಲೆಗಳನ್ನು ಗುರುತಿಸುವಿಕೆಯ ಸಲುವಾಗಿ ಕಾಲಾವಕಾಶ ಕೋರಿದ್ದರಿಂದ  ಮೂಂದೂಡಲಾಯಿತು.)

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿಸಹಿ ಮಾಡಲಾಗಿದೆ.)

ಓ ಹೇ ಕೇ ಸ ಇ ಒ

4 ನೇ ಅ ಮು ಮ ದಂ ನ್ಯಾ